ಕರ್ನಾಟಕ ಸರ್ಕಾರ

Govt of Karnataka

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103**

**OFFICE OF THE DEPUTY COMMISSIONER, BAGALAKOTE DISTRICT, BAGALAKOTE- 587103**

**Ph: 08354-235091 Fax: 08354-235096** **E-mail:deo.bagalkot@gmail.com**

ಕ್ರ:ಕಂಶಾ:ಎಲ್ಎಕ್ಯೂ:ಸಿಆರ್-18/15-16 ಬಾಗಲಕೋಟ ದಿ: 30-06-2020

ಗೆ,

ಉಪವಿಭಾಗಾಧಿಕಾರಿಗಳು

ಜಮಖಂಡಿ

ವಿಷಯ:ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗ ನಿರ್ಮಾಣದ ಯೋಜನೆಯಡಿ ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ **ತೇರದಾಳ** ಗ್ರಾಮದ ಕೆಲವು ಜಮೀನುಗಳ ಭೂಸ್ವಾಧೀನತೆಯ ಬಗೆಗಿನ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕರಡು ಯಾದಿಯನ್ನು ಅನುಮೋದಿಸಿದ ಕುರಿತು

ಉಲ್ಲೇಖ:ಆಯುಕ್ತರು, ರಾಜ್ಯ ಪುನರವಸತಿ ಮತ್ತು ಪುನರನಿರ್ಮಾಣ ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಪತ್ರ ಸಂಖ್ಯೆ:ಕಂಇ 25:ಎಲ್ಆರ್ಆರ್ :2020 ದಿನಾಂಕ:29-06-2020.

**ಮೇಲ್ಕಾಣಿಸಿದ** ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತದ್ವಯ ಬಾಗಲಕೋಟೆ-ಕುಡಚಿ **ರೈಲ್ವೆ ಮಾರ್ಗ ನಿರ್ಮಾಣದ ಯೋಜನೆಯಡಿ** ಬಾಗಲಕೋಟ ಜಿಲ್ಲೆಯ **ರಬಕವಿ-ಬನಹಟ್ಟಿ** ತಾಲೂಕಿನ **ತೇರದಾಳ** ಗ್ರಾಮದ 694/3 ರ ಈ 1 ಸರ್ವೇ ನಂಬರಗಳನ್ನೊಳಗೊಂಡಂತೆ ಒಟ್ಟು ಕ್ಷೇತ್ರ 65-33-01 **ಎ/ಗುಂ/ಆ** ಕೆಲವು ಜಮೀನುಗಳ ಭೂಸ್ವಾಧೀನತೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್‌ನಿರ್ಮಾಣ **ಕರಡು** ಯಾದಿಯನ್ನು `**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013**`ರ ಕಲಂ 18 ರಡಿ ಅನುಮೋದಿಸಿದ್ದು, ಸದರಿ ಅನುಮೋದಿತ ಮೂಲ ಕರಡು ಯಾದಿಯನ್ನು ಉಲ್ಲೇಖಿತ ಪತ್ರಕ್ಕೆ ಲಗತ್ತಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಮುಂದಿನ ಸೂಕ್ತ ಕ್ರಮವಹಿಸಲು ನಿರ್ದೇಶಿಸಿದ್ದು ಇರುತ್ತದೆ.

191/6

ಉಲ್ಲೇಖಿತ ಸರಕಾರದ ಪತ್ರವನ್ನು ಹಾಗೂ ಅನುಮೋದಿತ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಮೂಲ ಕರಡು ಯಾದಿಯನ್ನು ಈ ಪತ್ರಕ್ಕೆ ಲಗತ್ತಿದ್ದು, ಸದರಿ ಸರಕಾರದ ಪತ್ರದಲ್ಲಿ ನಿರ್ದೇಶಿಸಿದಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ನಿಯಮಾನುಸಾರ ಕಲಂ 19(1) ರಡಿ ಅಧಿಸೂಚನೆ ತಯಾರಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. ಹಾಗೂ ಉಲ್ಲೇಖಿತ ಸರಕಾರದ ಪತ್ರದನ್ವಯ ಕಳುಹಿಸಿದ ಅನುಮೋದಿತ ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ಕರಡು ಯಾದಿಯ ಪ್ರತಿಯನ್ನು ನಿಯಮಾನುಸಾರ ದಿನಾಂಕ:30-06-2020 ರಂದು ಈ ಕಾರ್ಯಾಲಯದ ನೋಟೀಸ ಬೋರ್ಡಿಗೆ ಡಕಾಯಿಸಿ ಪ್ರಸಿದ್ಧಿಪಡಿಸಲಾಗಿದೆ.

ಅಪರ ಜಿಲ್ಲಾಧಿಕಾರಿಗಳು
ಬಾಗಲಕೋಟ

**ಪ್ರತಿ:**ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್ಆಯ್‌ಸಿ ಬಾಗಲಕೋಟ ಇವರಿಗೆ

2/-ಉಲ್ಲೇಖಿತ ಸರಕಾರದ ಪತ್ರದನ್ವಯ ಅನುಮೋದನೆಗೊಂಡ ಪುನರವಸತಿ ಮತ್ತು ಪುನರನಿರ್ಮಾಣದ ಬಗೆಗಿನ ಕರಡು ಯಾದಿಯನ್ನು ಈ ಪತ್ರಕ್ಕೆ ಲಗತ್ತಿಸಿದ್ದು, ಸದರಿ ಕರಡು ಯಾದಿಯನ್ನು ಜಿಲ್ಲಾಧಿಕಾರಿಯವರ ವೆಬ್‌ಸೈಟಿನಲ್ಲಿ ನಿಯಮಾನುಸಾರ ಪ್ರಕಟಪಡಿಸಲು ನಿರ್ದೇಶಿಸಿದೆ.